3 ಜನವರಿ 2018 | ಬುಧವಾರ

ವಿಜಯವಾಣಿ

ಕನ್ನಡಿಗರ ಧ್ವನಿ

2018 ಹೊಸ ವರುಷ ತರಲಿ ಹರುಷ

# ಕೆರೆಗಳಿಗೆ ವರದಾ ನೀರು

## ಮಧುರವಳ್ಳಿಯಲ್ಲಿ ಕೆರೆಗಳ ಅಭಿವೃದ್ಧಿ ಕಾಮಗಾರಿಗೆ ಚಾಲನೆ

■ ವಿಜಯವಾಣಿ ಸುದ್ದಿಜಾಲ ಶಿರಸಿ

ಬನವಾಸಿ ಭಾಗದ ನೀರಿನ ಬರ ನೀಗುವ ಸಲುವಾಗಿ ಇಲ್ಲಿಯ ಕೆರೆಗಳಿಗೆ ವರದಾ ನದಿ ನೀರನ್ನು ತುಂಬುವ ಯೋಜನೆಗೆ ಶೀಘ್ರದಲ್ಲಿಯೇ ಚಾಲನೆ ಸಿಗಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಕಾಮಗಾರಿಗೆ ಚಾಲನೆ ನೀಡಲಿದ್ದಾರೆ ಎಂದು ಶಾಸಕ ಶಿವರಾಮ ಹೆಬ್ಬಾರ ಹೇಳಿದರು.



ಶಿರಸಿ ತಾಲೂಕು ಬನವಾಸಿ ಹೋಬಳಿಯ ಮಧುರವಳ್ಳಿ ಕೆರೆಯ ಅಭಿವೃದ್ಧಿ ಕಾರ್ಯಕ್ಕೆ ಶಾಸಕ ಶಿವರಾಮ ಹೆಬ್ಬಾರ ಚಾಲನೆ ನೀಡಿದರು. ತಾ. ಪಂ. ಅಧ್ಯಕ್ಷೆ ಶ್ರೀಲತಾ ಕಾಳೇರಮನೆ, ಮನುವಿಕಾಸ ಸಂಸ್ಥೆಯ ಗಣಪತಿ ಭಟ್ ಇತರರು ಇದ್ದರು.

ಮನುವಿಕಾಸ ಸಂಸ್ಥೆ ಹಮ್ಮಿಕೊಂಡಿರುವ ಇಲ್ಲಿಯ 9 ಕೆರೆಗಳ ಅಭಿವೃದ್ಧಿ ಕಾಮಗಾರಿಗೆ ಮಧುರವಳ್ಳಿಯಲ್ಲಿ ಮಂಗಳವಾರ ಚಾಲನೆ ನೀಡಿ ಅವರು ಮಾತನಾಡಿದರು. ಕಳೆದ ಮೂರು ದಶಕಗಳಿಂದ ಬನವಾಸಿ ಭಾಗದ ರೈತರು ನೀರಿನ ಸಮಸ್ಯೆಯಿಂದ ಬವಣೆ ಎದುರಿಸುತ್ತಿದ್ದಾರೆ. ಇಲ್ಲಿ ನೀರು ಕೊಟ್ಟರೆ ಬಂಗಾರ ಬೆಳೆ ಬೆಳೆಯಬಹುದು. ಎರಡು ವರ್ಷಗಳ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಕೆರೆಗಳಿಗೆ ವರದಾ ನದಿ ನೀರು ತುಂಬುವ ಯೋಜನೆ ಪ್ರಸ್ತಾಪಿಸಿದ್ದೆವು. 2013-14ರ ಬಜೆಟ್ ಅನುಮೋದನೆ ನೀಡಿದ್ದರೂ ತಾಂತ್ರಿಕ ಕಾರಣದಿಂದ ವಿಳಂಬ ಆಗಿತ್ತು. ಈಗ ಸಚಿವ ಸಂಪುಟ ಸಭೆ ಕೂಡ ಅನುಮೋದನೆ ನೀಡಿದ್ದು, ನೀರಾವರಿ ಇಲಾಖೆ ಸಚಿವ ಎಂ.ಬಿ.ಪಾಟೀಲ್ ಹಾಗೂ ಜಿಲ್ಲಾ ಸಚಿವ ಆರ್.ವಿ. ದೇಶಪಾಂಡೆ ಅವರ ಸಹಕಾರ ಸಾಕಷ್ಟಿದೆ. 64 ಕೋಟಿ ರೂ. ಯೋಜನೆಗೆ ಈಗಾಗಲೇ ಟೆಂಡರ್ ಕರೆಯಲಾಗಿದ್ದು, ಫೆ.2 ರಂದು ಮುಖ್ಯಮಂತ್ರಿ ಬನವಾಸಿಗೆ ಬಂದಾಗ ಈ ಕಾಮಗಾರಿಗೆ ಚಾಲನೆ ನೀಡಲಾಗುತ್ತದೆ ಎಂದರು.

ಪ್ರಥಮ ಹಂತದಲ್ಲಿ ಗುಡ್ನಾಪುರದ ದೊಡ್ಡ ಕೆರೆ ತುಂಬಲಾಗುತ್ತದೆ. ಬನವಾಸಿಯ ಮೂಲಕ ಹಾದು ಹೋಗುವ ವರದಾ ನದಿ ಮಳೆಗಾಲದಲ್ಲಿ ಉಕ್ಕುತ್ತದೆ. ಈ ನದಿ ನೀರು ಸ್ಥಳೀಯರಿಗೆ ಉಪಯೋಗ ಆಗುತ್ತಿರಲಿಲ್ಲ. ಈ ನೀರನ್ನು 38 ಕಿ.ಮೀ. ಕಾಲುವೆ ನಿರ್ಮಿಸುವ ಮೂಲಕ ಕೆರೆಗಳಿಗೆ ತರಲಾಗುತ್ತದೆ. ವರ್ಷದಲ್ಲಿ ಎರಡು ಸಲ ಕೆರೆ ತುಂಬುವ ಕಾರ್ಯ ಮಾಡಲಾಗುತ್ತದೆ ಎಂದರು. ಮನುವಿಕಾಸ ಸಂಸ್ಥೆಯ ಗಣಪತಿ ಭಟ್ಟ, ತಾ.ಪಂ. ಅಧ್ಯಕ್ಷೆ ಶ್ರೀಲತಾ ಕಾಳೇರಮನೆ, ಸದಸ್ಯರಾದ ಸುರೇಶ ನಾಯ್ಕ, ರತ್ನಾ ಶೆಟ್ಟಿ, ಜಿ.ಪಂ. ಸದಸ್ಯರಾದ ಬಸವರಾಜ ದೊಡ್ಮನಿ ಇತರರು ಇದ್ದರು.